**ಅಸಲು ದಾವೆ ಸಂಖ್ಯೆ 16/2017**

**ಪಿ.ಡಬ್ಲ್ಯೂ 01**

**ದಿಃ10.11.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1 ರವರ ಪರ ಶ್ರೀ ಕೆ.ಎಸ್.ಆರ್ ವಕೀಲರಿಂದಃ**

ನಾನು 4 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ನಾಗನಗೌಡ 2016 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾನೆ. ನನ್ನ ತಂದೆ ತನ್ನ ಜೀವಿತ ಕಾಲದಲ್ಲಿ 1 ನೇ ಪ್ರತಿವಾದಿಯೊಂದಿಗೆ ಇದ್ದ. ನನ್ನ ತಾಯಿ ನನ್ನ ತಂದೆಕ್ಕಿಂತ ಮೊದಲೆ ಮೃತಪಟ್ಟಿರುತ್ತಾಳೆ. ಪಾತಪೂರು ಗ್ರಾಮದ ಜಮೀನು ಸರ್ವೆ ನಂಬರ್ 26 ಕ್ಷೇತ್ರ 9 ಎಕರೆ 39 ಗುಂಟೆ, 81/1 ಕ್ಷೇತ್ರ 06 ಎಕರೆ, 33/1 ಕ್ಷೇತ್ರ 8 ಎಕರೆ ಹಾಗೂ ಚಿಕ್ಕಬಾದರದಿನ್ನಿ ಗ್ರಾಮದ ಜಮೀನು ಸರ್ವೆ ನಂಬರ್ 37/ಬಿ ಕ್ಷೇತ್ರ 8 ಎಕರೆ 8 ಗುಂಟೆ ಜಮೀನುಗಳು ಪಿತ್ರಾರ್ಜಿತ ಆಸ್ತಿಗಳು ಅಂದರೆ ಸಾಕ್ಷಿ ಕೇವಲ ಪಾತಪೂರು ಗ್ರಾಮದ ಜಮೀನುಗಳು ಮಾತ್ರ ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ಜಮೀನು ಸರ್ವೆ ನಂಬರ್ 37/ಬಿ ನಾವು ಎಲ್ಲರು ಒಟ್ಟಿಗೆ ಇದ್ದಾಗ ನನ್ನ ಸಹೋದರನ ಹೆಸರಿನಲ್ಲಿ ನನ್ನ ತಂದೆ ಹಣ ಕೊಟ್ಟು ಖರೀದಿಸಿರುತ್ತಾರೆ ಅಂದರೆ ಸರಿ. ಸರ್ವೆ ನಂಬರ್ 4/5 ಕ್ಷೇತ್ರ 7 ಎಕರೆ 16 ಗುಂಟೆ ಇದು ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ ಆಸ್ತಿ ನನ್ನ ತಾಯಿಯ ಹೆಸರಿನಲ್ಲಿ ಇತ್ತು.

ನನ್ನ ಹೆಂಡತಿ ಪಾರ್ವತಮ್ಮ ಸುಮಾರು 8-9 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನಗೆ ಮಕ್ಕಳು ಇರುವುದಿಲ್ಲ. ನನ್ನ ಹೆಂಡತಿಯ ತವರುಮನೆ ಬಲ್ಲಟಗಿ ಗ್ರಾಮ. ನನ್ನ ಹೆಂಡತಿಗೆ ತನ್ನ ತವರುಮನೆಯಿಂದ ಆಸ್ತಿ ಬಂದಿರುತ್ತದೆ ಅಂದರೆ ಸರಿಯಲ್ಲ. ನನ್ನ ಹೆಂಡತಿಗೆ ಸಹೋದರರು ಇರದೆ ಇರುವುದರಿಂದ ನಾನು ಅವರ ಮನೆಗೆ ಮನೆಅಳಿಯನಾಗಿ ಹೋಗಿರುತ್ತೇನೆ ಅಂದರೆ ಸರಿಯಲ್ಲ. ಜಮೀನು ಸರ್ವೆ ನಂಬರ್ 104/ಅ ಕ್ಷೇತ್ರ 3 ಎಕರೆ, 104/ಆ ಕ್ಷೇತ್ರ 3 ಎಕರೆ 28 ಗುಂಟೆ, 36/2 ಕ್ಷೇತ್ರ 7 ಎಕರೆ 12 ಗುಂಟೆ, 25/3 ಕ್ಷೇತ್ರ 2 ಎಕರೆ ಮತ್ತು 3/2 ಕ್ಷೇತ್ರ 2 ಎಕರೆ 24 ಗುಂಟೆ 1 ನೇ ಪ್ರತಿವಾದಿಯ ಹೆಂಡತಿಯ ತವರುಮನೆಯ ಆಸ್ತಿಗಳು ಅಂದರೆ ಸರಿಯಲ್ಲ. ಈ ಎಲ್ಲ ಆಸ್ತಿಗಳು ಎಲ್ಲರೂ ಕೂಡಿ ಇದ್ದಾಗ ಖರೀದಿಸಿದ ಆಸ್ತಿಗಳು. ನಾನು ಆ ಬಗ್ಗೆ ಖರೀದಿ ಪತ್ರಗಳನ್ನು ನೋಡಿರುವುದಿಲ್ಲ 1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು ಅಂದರೆ ಸರಿ. 1 ನೇ ಪ್ರತಿವಾದಿಯ ಮಾವ (ಹೆಂಡತಿಯ ತಂದೆ) ಇವರಿಗೆ ಗಂಡ ಸಂತಾನ ಇಲ್ಲ ಇಬ್ಬರು ಹೆಣ್ಣು ಮಕ್ಕಳು ಅಂದರೆ ಸರಿ. 1 ನೇ ಪ್ರತಿವಾದಿಯ ಮೊದಲನೆ ಹೆಂಡತಿ ಬಸಮ್ಮ ಹಾಗೂ ಎರಡನೆ ಹೆಂಡತಿ ಶಾಂತಮ್ಮ ಅಂದರೆ ಸರಿ. ಬಸಮ್ಮ ಇವರಿಗೆ ಮಕ್ಕಳು ಆಗಿಲ್ಲ ಹಾಗಾಗಿ ಅವರ ಸಹೋದರಿ ಶಾಂತಮ್ಮ ಇವರನ್ನು 2 ನೇ ಮದುವೆ ಮಾಡಿಕೊಂಡಿರುತ್ತಾರೆ. ಅವರೆಂದರೆ ಪ್ರತಿವಾದಿ ನಂ.4, 5 ಮತ್ತು ಒಬ್ಬ ಶಂಕರಗೌಡ ಅಂದರೆ ಸರಿ. ದಾವ ಆಸ್ತಿ ಕ್ರಮ ಸಂಖ್ಯೆ 5 ರಿಂದ 10 ಒಟ್ಟುಕುಟುಂಬದ ಸಂಪಾದನೆಯಿಂದ

ಖರೀದಿಸಿರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಒಟ್ಟುಕುಟುಂಬದ ಸಂಪಾದನೆಯಿಂದ ಸದರಿ ಆಸ್ತಿಗಳನ್ನು ಖರೀದಿಸಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಸಹ ನನಗೆ ಪಾಲು ಬರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಆಸ್ತಿಗಳು ಒಟ್ಟುಕುಟುಂಬದ ಸಂಪಾದನೆ ಆಸ್ತಿಗಳು ಅಲ್ಲ ಅವು 1 ನೇ ಪ್ರತಿವಾದಿಯ ಹೆಂಡತಿಯ ತವರುಮನೆಯ ಆಸ್ತಿಗಳು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಎರಡನೇ ಹೆಂಡತಿ ಶಾಂತಮ್ಮ ತನ್ನ ತವರುಮನೆಯ ಒಂದು ಆಸ್ತಿ ಮಾರಾಟ ಮಾಡಿ ಬಂದ ಹಣದಿಂದ ದಾವ ಆಸ್ತಿ ಕ್ರಮಸಂಖ್ಯೆ6 ರಿಂದ 8 ತನ್ನ ಮಕ್ಕಳಾದ ಪ್ರತಿವಾದಿ ನಂ.4, 5 ಮತ್ತು ಶಂಕರಗೌಡ ಇವರ ಹೆಸರಿನಲ್ಲಿ ಖರೀದಿಸಿರುತ್ತಾಳೆ ಅಂದರೆ ಸರಿಯಲ್ಲ. ಸದರಿ ಆಸ್ತಿಗಳು ಪ್ರತಿವಾದಿಯರ ಸ್ವಂತ ಸಂಪಾದನೆ ಆಸ್ತಿಗಳು ಇದ್ದರು ಸಹ ಒಟ್ಟುಕುಟುಂಬದ ಆಸ್ತಿಗಳು ಎಂದು ಸುಳ್ಳಾಗಿ ಬರೆಯಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳಿಗೆ ಪ್ರತಿವಾದಿ ನಂ.4 ಮತ್ತು 5 ಯಾವುದೇ ಸಂಬಂಧ ಇಲ್ಲ ಆದರೂ ಅವರನ್ನು ಅನವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ತಂದೆ ಬಿಟ್ಟು ಹೋದ ಆಸ್ತಿಗೆ ನಾನು ನನ್ನ 3 ಜನ ಸಹೋದರರು ಮಾತ್ರ ಹಕ್ಕುದಾರರು ಬೇರೆ ಆಸ್ತಿಗಳಿಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ.

ನನ್ನ ಮದುವೆ 1973 ನೇ ಸಾಲಿನಲ್ಲಿ ಆಗಿರುತ್ತದೆ. ನನ್ನ ಸಹೋದರ 1 ನೇ ಪ್ರತಿವಾದಿಯ ಮದುವೆ ನನ್ನ ಮದುವೆ ಮೊದಲೇ ಆಗಿರುತ್ತದೆ. ಪ್ರತಿವಾದಿ ನಂ.2 ಮತ್ತು 3 ಇವರ ಮದುವೆ ನಂತರ ಆಗಿರುತ್ತದೆ. ಮದುವೆಯಾದ ನಂತರ ನಾವು ಬೇರೆ-ಬೇರೆ ವಾಸ ಇದ್ದೆವು ಅಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ನಾವು ವಿಭಾಗ ಮಾಡಿಕೊಂಡಿಲ್ಲ, ಒಟ್ಟಿಗೆ ಇದ್ದೆವು. ನನ್ನ ತಂದೆ ಮೃತಪಟ್ಟ ನಂತರ ಏಕೆ ದಾವೆ ಸಲ್ಲಿಸಿಲ್ಲ ಅಂದರೆ ಆಸ್ತಿಗಳಲ್ಲಿ ಬೆಳೆದ ಬೆಳೆಯಲ್ಲಿ ಪಾಲು ಕೊಡುತ್ತಿದ್ದರು ಕಾರಣ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿ ಕ್ರಮಸಂಖ್ಯೆ1 ರಿಂದ 4 ಒಣಬೇಸಾಯ ಜಮೀನುಗಳು ಅಂದರೆ ಸರಿ. ವಾರ್ಷಿಕ 25 ಸಾವಿರ ನಮಗೆ ಪ್ರತಿವಾದಿಯರು ಕೊಡುತ್ತಿದ್ದರು ಆದರೆ ಆ ಬಗ್ಗೆ ಯಾವುದೇ ಬರವಣಿಗೆ ಇಲ್ಲ. ದಾವ ಆಸ್ತಿಗಳಲ್ಲಿ ನಮಗೆ ಯಾವುದೇ ರೀತಿಯಿಂದ ಪಾಲು ಇಲ್ಲ ಆದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

3 ನೇ ಪ್ರತಿವಾದಿ ನನ್ನ ಸಹೋದರ ಸರಕಾರಿ ನೌಕರಸ್ತ ಅಂದರೆ ಸರಿ. 3 ನೇ ಪ್ರತಿವಾದಿ ತನ್ನ ನೌಕರಿ ಸ್ಥಳದಲ್ಲಿ ತನ್ನ ಹೆಂಡತಿ-ಮಕ್ಕಳೊಂದಿಗೆ ವಾಸ ಇದ್ದ ಅಂದರೆ ಸರಿ. ದಾವ ಆಸ್ತಿ ಕ್ರಮಸಂಖ್ಯೆ5 ರಿಂದ 10 ರಲ್ಲಿ ಭಾಗ ಕೇಳುವ ಅಧಿಕಾರ ನಮಗೆ ಇಲ್ಲ ಅಂದರೆ ಸರಿಯಲ್ಲ. ಸರ್ವೆ ನಂಬರ್ 26 ಎರಡನೇ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಸರ್ವೆ ನಂಬರ್ 81 ನ್ನು 3 ನೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ. ಪ್ರತಿವಾದಿ ನಂ.2 ಮತ್ತು 3 ದಾನ ಪತ್ರದ ಮೂಲಕ ಸದರಿ ಜಮೀನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ. ಪ್ರತಿವಾದಿ ನಂ.2 ಮತ್ತು 3 ದಾನ ಪತ್ರ ಮಾಡಿಕೊಂಡ ವಿಷಯ ನನಗೆ 2010 ನೇ ಸಾಲಿನಲ್ಲಿ ಮಾಹಿತಿ ಇತ್ತು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2015-2016 ನೇ ಸಾಲಿನಲ್ಲಿ ನನಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.2 ಮತ್ತು 3 ತಮ್ಮ ಹೆಸರಿನಲ್ಲಿ ದಾನ ಪತ್ರ ಮಾಡಿಕೊಂಡಿರುವುದನ್ನು 1 ನೇ ಪ್ರತಿವಾದಿ ಎಂದೂ ಕೇಳಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಹೆಂಡತಿಯ ತವರುಮನೆಯಿಂದ ಸಾಕಷ್ಟು

ಆಸ್ತಿಗಳು ಬಂದಿದ್ದವು ಆ ಕಾರಣಕ್ಕಾಗಿ ನನ್ನ ತಂದೆಯ ಆಸ್ತಿಯಲ್ಲಿ ಯಾವುದೇ ಪಾಲು ಬೇಡ ಎಂದು 2 ಮತ್ತು 3 ನೇ ಪ್ರತಿವಾದಿಗೆ ಕೇಳಿಲ್ಲ ಅಂದರೆ ಸರಿಯಲ್ಲ. ಆ ಎಲ್ಲ ವಿಷಯಗಳು ನನಗೆ ಮಾಹಿತಿ ಇಲ್ಲ ಇದ್ದರು ಸುಳ್ಳು ಸಂಗತಿಗಳನ್ನು ಹೇಳಿಕೊಂಡು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ಮಾತ್ರ ನಮಗೆ ಆಸ್ತಿ ಬರುತ್ತದೆ ಕ್ರಮಸಂಖ್ಯೆ 5 ರಿಂದ 10 ರಲ್ಲಿ ನಮಗೆ ಯಾವುದೇ ಪಾಲು ಬರುವುದಿಲ್ಲ ಅಂದರೆ ಸರಿಯಲ್ಲ. ಕ್ರಮಸಂಖ್ಯೆ 5 ರಿಂದ 10 ರ ಆಸ್ತಿಗಳು ಪ್ರತಿವಾದಿ ನಂ.4 ಮತ್ತು 5 ರವರ ತಾಯಿಯ ಸ್ವಾಯಾರ್ಜಿತ ಆಸ್ತಿಗಳು ಅದರಲ್ಲಿ ನಮಗೆ ಯಾವುದೇ ರೀತಿಯ ಪಾಲುಗಳು ಇಲ್ಲ ಅಂದರೆ ಸರಿಯಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪ್ರತಿವಾದಿ ನಂ.10 ರವರ ಪರ ಶ್ರೀ ಜೆ.ಹೆಚ್.ಎನ್ ವಕೀಲರು ಹಾಜರು ಇದ್ದು ಶ್ರೀ ಕೆ.ಎಸ್.ಆರ್ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಪಾಟೀ ಸವಾಲುಃ ಉಳಿದ ಪ್ರತಿವಾದಿಯರ ಪರ ವಕೀಲರು ಹಾಜರು ಇದ್ದು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದು ಮುಂದುಡಲಾಯಿತು.**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**